# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 377 (429) |
| ಸದಸ್ಯರ ಹೆಸರು | ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | 30.01.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಲೇಔಟ್ / ನಿವೇಶನಗಳ ನಕ್ಷೆಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಾಧಿಕಾರ ಯಾವುದು; ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡುವಾಗ ಅನುಸರಿಸುವ ಕ್ರಮಗಳೇನು; (ವಿವರ ನೀಡುವುದು) | ಗ್ರಾಮ ಪಂಚಾಯಿತಿಗಳಲ್ಲಿ ಲೇಔಟ್ / ಏಕ ನಿವೇಶನ ನಕ್ಷೆಗಳಿಗೆ ಅನುಮೋದನೆ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಅಥವಾ ಅವರಿಂದ ಅಧಿಕೃತಗೊಳಿಸಲಾದ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆ ಇಲ್ಲದಂತಹ ಜಿಲ್ಲಾಮಟ್ಟದ / ವಿಭಾಗೀಯ ಮಟ್ಟದ ಅಧಿಕಾರಿಗಳಿಂದ ತಾಂತ್ರಿಕ ಅನುಮೋದನೆಯನ್ನು ನೀಡಲಾಗುತ್ತದೆ.<br><br>ತಾಂತ್ರಿಕ ಅನುಮೋದನೆ ಪಡೆದ ನಂತರವೇ ಗ್ರಾಮ ಪಂಚಾಯಿತಿಗಳಿಂದ ಲೇಔಟ್ / ಏಕ ನಿವೇಶನ ನಕ್ಷೆಗಳ ಪ್ರಸ್ತಾವನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4-ಕೆ ಅವಕಾಶದನ್ವಯ ಹಾಗೂ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದ ಭೂ ಅಭಿವೃದ್ಧಿ ನಿಯಮಾವಳಿ 2025 ರಡಿಯಲ್ಲಿ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆಗಳನ್ನು ನೀಡಲಾಗುತ್ತದೆ.<br><br>**ಅನುಸರಿಸಬೇಕಾದ ಕ್ರಮಗಳು:-**<br>• ಲೇಔಟ್ ಅನುಮೋದನೆಗಾಗಿ ಅರ್ಜಿದಾರರು / ಅಭಿವೃದ್ಧಿಪಡಿಸುವವರು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.<br>• ಅರ್ಜಿಯೊಂದಿಗೆ ಮಾಲೀಕತ್ವ ದಾಖಲೆಗಳು, ಹೊಂದಿಕೊಂಡಿರುವ ರಸ್ತೆ, ಸಾರ್ವಜನಿಕ ಉಪಯೋಗ ಮತ್ತು ನಾಗರಿಕ ಸೌಲಭ್ಯಗಳಿಗೆ ಮೀಸಲಾತಿ ಹಾಗೂ ಬಯಲು ಜಾಗಗಳ ವಿವರಗಳುಳ್ಳ ವಿನ್ಯಾಸ ನಕ್ಷೆ ಸಲ್ಲಿಸಬೇಕಾಗುತ್ತದೆ. |

| | | |
|---|---|---|
| | | • ಸಂಬಂಧಪಟ್ಟ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಜಿಲ್ಲಾ ಮಟ್ಟದ ಕಚೇರಿಯಲ್ಲಿ ಅರ್ಜಿಯ ತಾಂತ್ರಿಕ ಪರಿಶೀಲನೆ ನಡೆಸಲಾಗುತ್ತದೆ. ಈ ಪರಿಶೀಲನೆಯಲ್ಲಿ ಕನಿಷ್ಠ ರಸ್ತೆ ಅಗಲ, ನಿವೇಶನ ಗಾತ್ರ, ಸಾರ್ವಜನಿಕ ಉಪಯೋಗ ಭೂಮಿ ಮೀಸಲಾತಿ, ಪರಿಸರ ಹಾಗೂ ಕಾಯ್ದೆ- ನಿಯಮಗಳನ್ನು ಪಾಲಿಸಿರುವ ಬಗ್ಗೆ ಪರಿಶೀಲಿಸಲಾಗುತ್ತದೆ. |
| (ಆ) | ಗ್ರಾಮೀಣ ಭಾಗಗಳಲ್ಲಿ ಅಕ್ರಮವಾಗಿ ಲೇಔಟ್ / ನಿವೇಶನ ನಕ್ಷೆಗಳಿಗೆ ಅನುಮೋದನೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ ಜಿಲ್ಲಾವಾರು ಮತ್ತು ತಾಲೂಕುವಾರು ಮಾಹಿತಿ ನೀಡುವುದು) | ಗ್ರಾಮ ಪಂಚಾಯಿತಿಗಳಲ್ಲಿ ಲೇಔಟ್ / ಏಕ ನಿವೇಶನ ನಕ್ಷೆಗಳಿಗೆ ಅನುಮೋದನೆ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಮಾತ್ರ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಅಥವಾ ಅವರಿಂದ ಅಧಿಕೃತಗೊಳಿಸಲಾದ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆ ಇಲ್ಲದಂತಹ ಜಿಲ್ಲಾಮಟ್ಟದ / ವಿಭಾಗೀಯ ಮಟ್ಟದ ಅಧಿಕಾರಿಗಳಿಂದ ತಾಂತ್ರಿಕ ಅನುಮೋದನೆಯನ್ನು ನೀಡಲಾಗುತ್ತಿದೆ.<br><br>ಹಾಗಾಗಿ, ಗ್ರಾಮೀಣ ಭಾಗದಲ್ಲಿ ಅಕ್ರಮವಾಗಿ ಲೇಔಟ್ / ನಿವೇಶನ ನಕ್ಷೆಗಳಿಗೆ ಅನುಮೋದನೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| (ಇ) | ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; (ಅಧಿಕಾರವಾರು ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ. |
| (ಈ) | ಗ್ರಾಮೀಣ ಭಾಗಗಳಲ್ಲಿ ನಿವೇಶನ ನಕ್ಷೆಗಳಿಗೆ ಅಕ್ರಮವಾಗಿ ಅನುಮೋದನೆ ನೀಡುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | |

ಕಡತ ಸಂಖ್ಯೆ:ನಅಇ 37 ಮೈಅಪ್ರಾ 2026

(ಬಿ.ಎಸ್.ಸುರೇಶ)

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.